# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಸದಸ್ಯರ ಹೆಸರು | ಶ್ರೀ ವೈ.ಎಂ.ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 215(368) |
| ಉತ್ತರಿಸಬೇಕಾದ ದಿನಾಂಕ | 12.08.2025 |
| ಉತ್ತರಿಸಬೇಕಾದವರು | ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬಳ್ಳಾರಿ ನಗರದಲ್ಲಿ ಪ್ರಸ್ತುತ ಎಷ್ಟು ಎಸ್.ಟಿ.ಪಿ ಗಳಿವೆ; ಮತ್ತು ಎಷ್ಟು ಎಸ್.ಟಿ.ಪಿ ಗಳು ಕಾರ್ಯನಿರ್ವಹಿಸುತ್ತಿವೆ; | ಬಳ್ಳಾರಿ ನಗರದಲ್ಲಿ ಒಟ್ಟು 04 ಸಂಖ್ಯೆಯ ಒಟ್ಟು 57 ಎಂ.ಎಲ್.ಡಿ ಸಾಮರ್ಥ್ಯದ ಎಸ್.ಟಿ.ಪಿ ಗಳು ಕಾರ್ಯನಿರ್ವಹಿಸುತ್ತಿವೆ.<br>➢ ಬಳ್ಳಾರಿ ನಗರದಲ್ಲಿನ 30 ಎಂ.ಎಲ್.ಡಿ ಸಾಮರ್ಥ್ಯದ ಮತ್ತು 15 ಎಂ.ಎಲ್.ಡಿ ಸಾಮರ್ಥ್ಯದ ಎರಡು ಮಲೀನ ನೀರು ಸಂಸ್ಕರಣಾ ಘಟಕಗಳನ್ನು ದಿನಾಂಕ:01.06.2017 ರಂದು ಮಂಡಳಿ ವತಿಯಿಂದ ಬಳ್ಳಾರಿ ಮಹಾನಗರ ಪಾಲಿಕೆಗೆ ಹಸ್ತಾಂತರಿಸಲಾಗಿರುತ್ತದೆ. ಪ್ರಸ್ತುತ ಒಳಚರಂಡಿ ವ್ಯವಸ್ಥೆಯ ಸಂಪೂರ್ಣ ನಿರ್ವಹಣೆಯನ್ನು ಬಳ್ಳಾರಿ ಮಹಾನಗರ ಪಾಲಿಕೆ ಬಳ್ಳಾರಿ ವತಿಯಿಂದ ನಿರ್ವಹಿಸಲಾಗುತ್ತಿದೆ.<br>➢ ಕೇಂದ್ರ ಪುರಸ್ಕೃತ ಅಮೃತ್ ಯೋಜನೆಯ ಒಳಚರಂಡಿ ಕಾಮಗಾರಿಯಡಿಯಲ್ಲಿ ಬಳ್ಳಾರಿ ನಗರದಲ್ಲಿ 10 ಎಂ.ಎಲ್.ಡಿ ಮತ್ತು 02 ಎಂ.ಎಲ್.ಡಿ ಸಾಮರ್ಥ್ಯದ ಮಲೀನ ನೀರು ಸಂಸ್ಕರಣಾ ಘಟಕಗಳನ್ನು ನಿರ್ಮಿಸಲಾಗಿದ್ದು, ಸದರಿ ಎಸ್.ಟಿ.ಪಿ ಗಳ ನಿರ್ವಹಣೆಯನ್ನು ಮಂಡಳಿ ವತಿಯಿಂದ ನಿರ್ವಹಿಸಲಾಗುತ್ತಿದೆ. |
| ಆ) | ಈ ಎಸ್.ಟಿ.ಪಿ ಗಳು ಸಾಕಷ್ಟು ಸಂಖ್ಯೆಯಲ್ಲಿವೆಯೇ; ಇಲ್ಲದಿದ್ದಲ್ಲಿ, ಸರ್ಕಾರವು ಯಾವ ಯಾವ ಕ್ರಮಗಳನ್ನು ಕೈಗೊಂಡಿದೆ? | ಕಾರ್ಯ ನಿರ್ವಹಿಸುತ್ತಿರುವ ಎಸ್.ಟಿ.ಪಿಗಳು ಪ್ರಸ್ತುತ ಜನಸಂಖ್ಯೆಗೆ ಅವಶ್ಯಕವಿರುವ ಪ್ರಮಾಣದಲ್ಲಿ ಇರುತ್ತದೆ. ಪ್ರಸ್ತುತ ಹೊಸದಾಗಿ ಎಸ್.ಟಿ.ಪಿ ನಿರ್ಮಿಸುವ ಬಗ್ಗೆ ಸ್ಥಳೀಯ ಸಂಸ್ಥೆಯಿಂದ ಯಾವುದೇ ಪ್ರಸ್ತಾವನೆಯು ಬಂದಿರುವುದಿಲ್ಲ. |

ಸಂಖ್ಯೆ : ನಅಇ 75 ಯುಎಂಎಸ್ 2025

**(ಬಿ.ಎಸ್. ಸುರೇಶ)**
ನಗರಾಭಿವೃದ್ಧಿ ಮತ್ತು
ನಗರ ಯೋಜನೆ ಸಚಿವರು